

ಶಾನನ್ ನದಿ ಹಾಗೂ ಕೋಟೆಯ ವಿಹಂಗಮ ನೋಟ.

**ಐರ್ಲೆಂಡ್‌ನ ಅಥ್ಲೋನ್ ಪ್ರಾಕೃತಿಕ ಸೌಂದರ್ಯ ಹಾಗೂ ಉದ್ಯಮದ ವರ್ಚಸ್ಸು ಎರಡನ್ನೂ ಒಳಗೊಂಡಿರುವ ವಿಶಿಷ್ಟ ಪಟ್ಟಣ. ಸೌಂದರ್ಯದ ಅನೇಕ ತುಣುಕುಗಳು ಕೊಲಾಜ್ ರೂಪದಲ್ಲಿ ಸೇರಿಕೊಂಡು ರೂಪುಗೊಂಡಿರುವ ಅಪೂರ್ವ ಕಲಾಕೃತಿಯಂತೆ ಅಥ್ಲೋನ್ ಕಾಣಿಸುತ್ತದೆ.**

ಮೇಲ್ನೋಟಕ್ಕೆ ಬಹು ಭುಜಾಕೃತಿಯಲ್ಲಿರುವ ಕೋಟೆಯನ್ನು ಪ್ರವೇಶಿಸಲು ಇಳಿಜಾರು ರೀತಿಯಲ್ಲಿರುವ ಮಾರ್ಗದಲ್ಲಿ ಮೇಲೆ ನಡೆದು ಹೋಗಬೇಕು. ಒಳಗಡೆ ಹೋದಾಗ ಕೋಟೆಯ ಕೇಂದ್ರ ಭಾಗದಲ್ಲಿ ಡ್ರಮ್ ಆಕೃತಿಯ ಗೋಪುರ ಕಂಡುಬರುತ್ತದೆ. 18ನೇ ಶತಮಾನದ ವೇಳೆಗೆ ಈ ಕೋಟೆ ಫಿರಂಗಿ ದಳದ ಮಿಲಿಟರಿ ಬ್ಯಾರಕ್ ಆಗಿ ವಿಸ್ತರಣೆಯಾಗಿತ್ತು.

1922ರಲ್ಲಿ ಬ್ರಿಟಿಷ್ ಪಡೆಗಳ ವಶವಾದಾಗ ಈ ಕೋಟೆಗೆ ಬ್ರಿಗೇಡಿಯರ್ ಜಾರ್ಜ್ ಆಡ್‌ಮನ್ಸ್ ಅವರ ಹೆಸರಿಡಲಾಯಿತು. ಪ್ರಸ್ತುತ 'ಅಥ್ಲೋನ್ ಕ್ಯಾಸಲ್' ಎಂದು ಕರೆಸಿಕೊಳ್ಳುವ ಕೋಟೆಯನ್ನು 'ರಾಷ್ಟ್ರೀಯ ಸ್ಮಾರಕ' ಎಂದು ಘೋಷಿಸಲ್ಪಟ್ಟಿದೆ.

ಕ್ಯಾಸಲ್ ಅನ್ನು ನವೀಕರಿಸಿ 1991ರಲ್ಲಿಸಂದರ್ಶಕರ ಕೇಂದ್ರವೊಂದನ್ನು ತೆರೆಯಲಾಯಿತು. 2012ರ ವೇಳೆಗೆ ಕೋಟೆಯ ಕೇಂದ್ರ ಭಾಗದ ಕಟ್ಟಡವನ್ನು ಮ್ಯೂಸಿಯಂ ಆಗಿ ಪರಿವರ್ತಿಸಿ ಪ್ರವಾಸಿಗರ ಪ್ರದರ್ಶನಕ್ಕೆ ಅವಕಾಶ ಕಲ್ಪಿಸಲಾಗಿದೆ. ಹೊಸದಾಗಿ ವಿನ್ಯಾಸಗೊಳಿಸಲಾದ ಮ್ಯೂಸಿಯಂನಲ್ಲಿ 8 ವಿಭಾಗಗಳಿವೆ. ಸ್ಥಳೀಯ ಇತಿಹಾಸದ ಹಿಂದಿನ ಕಾಲಘಟ್ಟದ ಕೃಷಿ ಹಾಗೂ ಉಪ ಕಸುಬುಗಳ ಹಾಗೂ ಉಪಕರಣಗಳನ್ನು ಸಂಗ್ರಹಿಸಲಾಗಿದೆ. ಕಾಲಾನುಕ್ರಮ ಮಾನವನ ಇತಿಹಾಸ, ಐತಿಹಾಸಿಕ, ಶಿಲಾಮುದ್ರೆಗಳು, ಸೈನಿಕ ದಂಡನಾಯಕರುಗಳ ಪ್ರತಿಕೃತಿಗಳು, ಆಯುಧ ಸಲಕರಣೆಗಳು, ಶಿಲ್ಪಕಲೆಗಳು ಹಾಗೂ ಚಿತ್ರಪಟಗಳು ಇಲ್ಲಿವೆ.

ಮಲ್ಟಿಮೀಡಿಯಾ ಕೇಂದ್ರ ಮತ್ತು 3ಡಿ ನಕ್ಷೆಗಳ ಮೂಲಕ ಅಥ್ಲೋನಿನ ಐದು ಸಹಸ್ರಮಾನದ ಇತಿಹಾಸ ವಿವರಣೆ ತಿಳಿಸುವ ವ್ಯವಸ್ಥೆ ಅಲ್ಲಿದೆ.




### ಸೇಂಟ್ಸ್ ಪೀಟರ್ ಮತ್ತು ಪಾಲ್ ಚರ್ಚ್

ಅಥ್ಲೋನ್ ಕ್ಯಾಸಲ್‌ನ ಎಡಭಾಗದ ರಸ್ತೆ ಪಕ್ಕದಲ್ಲಿ ಚರ್ಚ್ ಆಫ್ ಸೇಂಟ್ಸ್ ಮತ್ತು ಪಾಲ್ ಕಟ್ಟಡವಿದೆ. 1930ರಲ್ಲಿ ನಿರ್ಮಾಣವಾಗಿರುವ ಈ ಚರ್ಚ್‌ನ ಪೋರ್ಟಿಕೊ, ಗುಮ್ಮಟ ಮತ್ತು ಇಟಲಿಯನೇಟ್ ಗೋಪುರಗಳ ವಾಸ್ತುಶಿಲ್ಪವನ್ನು ಸ್ವಾತಂತ್ರ್ಯದ ಹಿನ್ನೆಲೆಯಲ್ಲಿ ಐರಿಶ್ ಕ್ಯಾಥೊಲಿಕ್ ಧರ್ಮದ ಪ್ರತಿಪಾದನೆಯಂತೆ ನಿರ್ಮಿಸಲಾಗಿದೆ. ಮೊಸಾಯಿಕ್, ಕೆಂಪು ಬಿಳಿ ಅಮೃತಶಿಲೆ ಹಾಗೂ ಬಣ್ಣದ ಗಾಜಿನ ವರ್ಣ ಚಿತ್ರಗಳ ಕಿಟಕಿಗಳು ಚರ್ಚ್‌ನ ಸೌಂದರ್ಯವನ್ನು ಹೆಚ್ಚಿಸಿವೆ.



ಶಾನನ್ ನದಿಗೆ ನಿರ್ಮಿಸಿರುವ ಸೇತುವೆ

### ಸೀನ್ಸ್ ಬಾರ್

ಅಥ್ಲೋನ್ ಕ್ಯಾಸಲ್‌ನ ಬಲಭಾಗದ ಮುಖ್ಯರಸ್ತೆಯಲ್ಲಿ 10ನೇ ಶತಮಾನದಲ್ಲಿನ ಹಳೆಯ ಪಬ್ ಇದೆ. 2004ರಲ್ಲಿ ಯುರೋಪ್ ದೇಶದ ಅತ್ಯಂತ ಹಳೆಯ ಪಬ್ ಎಂದು ಇದನ್ನು ಘೋಷಿಸಲಾಗಿದೆ. ಇದು ಗಿನ್ನಿಸ್ ಬುಕ್ ಆಫ್ ವರ್ಲ್ಡ್ ರೆಕಾರ್ಡ್‌ಗೆ ಸೇರಿದೆ. ಈ ಪಬ್‌ನ ಪ್ರಾಚೀನ ಹೆಸರು 'ಲುಯಿನ್ ಇನ್'. 1970ರಲ್ಲಿ ನವೀಕರಣಗೊಂಡಿದೆ. ಈ ಕಟ್ಟಡದ ರಸ್ತೆಯ ಕೋಟೆ ಸನಿಹದಲ್ಲೇ 'ಮದರ್ ಇಂಡಿಯಾ' ಎಂಬ ಹೋಟೆಲ್ ಇರುವುದನ್ನು ನೋಡಿದಾಗ ಭಾರತೀಯನಾದ ನನಗೆ ಅಭಿಮಾನ ಮೂಡಿಬಂತು.

### ಸೇಂಟ್ ಮೇರಿಸ್ ಚರ್ಚ್

ಶಾನನ್ ನದಿಯ ಎಡಗಡೆಯ ಪ್ರದೇಶದಲ್ಲಿ 1857–61ರಲ್ಲಿ ನಿರ್ಮಾಣವಾದ 'ಸೇಂಟ್ ಮೇರಿಸ್ ಚರ್ಚ್'ನ ವಿನ್ಯಾಸಕಾರ ಡಬ್ಲಿನ್‌ನ ವಾಸ್ತುಶಿಲ್ಪಿ ಜಾನ್ ಬೇಕರ್. ಈ ಚರ್ಚಿನ ಮುಂಭಾಗದ ಜಾಗ ಸೇಂಟ್ ಮೇರಿಸ್ ವೃತ್ತ ಹಳೆಯ ಅಥ್ಲೋನ್‌ನ ಮಾರುಕಟ್ಟೆ ಸ್ಥಳವಾಗಿತ್ತು. ಇದರ ಪರಿಸರದಲ್ಲೇ 1885ರಲ್ಲಿ ಮಾರಿಸ್ಟ್ ಬ್ರದರ್ಸ್ ಇಲ್ಲಿನ ಯುವಕರಿಗೆ ಶಿಕ್ಷಣ ನೀಡಲು ರಾಷ್ಟ್ರೀಯ ಶಾಲೆಯೊಂದನ್ನು ತೆರೆದಿದ್ದರು. ಈ ಶಾಲೆ 1936ರವರೆಗೂ ಇತ್ತು. ಹಳೆಯ ಮಾರುಕಟ್ಟೆ ಮೈದಾನ 1920–30ರ ದಶಕಗಳಲ್ಲಿ ರಾಜಕೀಯ ಸಭೆ ಹಾಗೂ ರ‍್ಯಾಲಿ ನಡೆಯುವ ಸ್ಥಳವಾಗಿತ್ತು.

### ದೋಣಿ ವಿಹಾರ

ಶಾನನ್ ನದಿಗೆ ಅಡ್ಡಲಾಗಿ ಒಡ್ಡು ನಿರ್ಮಿಸಲಾಗಿದೆ. ಇದರಿಂದಾಗಿ ಕೋಟೆಯ ಪರಿಸರದಲ್ಲಿ ನದಿ ಸರೋವರದಂತೆ ಕಂಡುಬರುತ್ತದೆ. ಇಲ್ಲಿ ಪ್ರವಾಸಿಗರಿಗೆ ವಿಹಾರಕ್ಕಾಗಿ ಬೋಟ್‌ಗಳ ವ್ಯವಸ್ಥೆ ಇದೆ. ನದಿಯ ಪರಿಸರದಲ್ಲಿ ವಲಸೆ ಪಕ್ಷಿಗಳನ್ನು ಕಾಣಬಹುದು. ಹುಲ್ಲುಗಾವಲಿನಲ್ಲಿ ವಿಹರಿಸುವುದು, ನದಿದಂಡೆಯಲ್ಲಿ ಪಾದಯಾತ್ರೆ, ದೋಣಿವಿಹಾರದ ಅನುಭವಗಳು ಅಥ್ಲೋನ್ ಪ್ರವಾಸವನ್ನು ಅವಿಸ್ಮರಣೀಯವಾಗಿಸುತ್ತವೆ.

ಅಥ್ಲೋನ್ ಪಟ್ಟಣದ ವಸತಿ ಬಡಾವಣೆಗಳು ಸೇರಿದಂತೆ ಎಲ್ಲಾ ರಸ್ತೆಗಳನ್ನು ಪಾದಚಾರಿಗಳಿಗೆ ಅನುಕೂಲವಾಗುವಂತೆ ವ್ಯವಸ್ಥಿತವಾಗಿ ನಿರ್ಮಿಸಲಾಗಿದೆ. ಕೆಲವು ಕಡೆ ಹಸಿರುಯುಕ್ತ ಫುಟ್‌ಪಾತ್‌ಗಳಿವೆ. ಫುಟ್‌ಪಾತ್‌ನ ಪಕ್ಕದಲ್ಲಿಯೇ ಸೈಕಲ್ ಸವಾರರಿಗೆ ಪ್ರತ್ಯೇಕ ಮಾರ್ಗವನ್ನು ವ್ಯವಸ್ಥೆ ಮಾಡಿರುವುದು ವಿಶೇಷ. ಈ ಪಟ್ಟಣದ ಯಾವುದೇ ವೃತ್ತಗಳಲ್ಲಿ ಸಂಚಾರಿ ಪೊಲೀಸ್ ವ್ಯವಸ್ಥೆಯಿಲ್ಲ. ವೃತ್ತಗಳಲ್ಲಿ ಸಿಗ್ನಲ್ ಲೈಟ್‌ಗಳು ಹಾಗೂ ರಸ್ತೆಗಳಲ್ಲಿ ಪಾದಚಾರಿಗಳು ರಸ್ತೆಯನ್ನು ದಾಟಲು ಸ್ವಯಂ ಸಿಗ್ನಲ್ ವ್ಯವಸ್ಥೆಯನ್ನು ಮಾಡಲಾಗಿದೆ.

ಪ್ರತಿಕ್ರಿಯಿಸಿ: feedback@sudha.co.in